ವೃದ್ಧರಿಗೆ, ಅಂಗವಿಕಲರಿಗೆ, ವಿಧವೆಯರಿಗೆ ಮಾಸಾಶನವನ್ನು ಹೆಚ್ಚಿಸುವುದು.

ಶ್ರೀ ಇ. ಮಾರುತಿರಾವ್ ಪವಾರ್ : (ನರಸಿಂಹರಾಜ) ಮಾನ್ಯ ಅಧ್ಯಕ್ಷರೇ, 1997ರ ಆಯವ್ಯಯದಲ್ಲಿ ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ವೃದ್ಧರಿಗೆ ಅಂಗವಿಕಲರಿಗೆ ಹಾಗೂ ನಿರಾಶ್ರಿತ ವಿಧವೆಯರಿಗೆ 75 ರೂಪಾಯಿಗಳಿಂದ ಮಾಸಾಶನವನ್ನು 100 ರೂಪಾಯಿಗೆ ಮಾಡಿದ್ದೇವೆ ಎಂದು 97ರ ಬಜೆಟ್ ಪುಸ್ತಕದಲ್ಲಿ ನಮಗೆ ಕೊಟ್ಟಿದ್ದಾರೆ. ಆದರೆ ಇಲ್ಲಿಯತನಕ 7.5 ರೂಪಾಯಿಗಳನ್ನೇ ಅವರಿಗೆ ಕೊಡುತ್ತಿದ್ದಾರೆ. ನಾನು ಮೈಸೂರಿನಲ್ಲಿ ಕಿವುಡ ಮತ್ತು ಮೂಗರ ಶಾಲೆಗೆ ಹೋದಾಗ ಕುರುಡರು ಅತ್ತುಕೊಂಡು ನಮಗೆ ಇಲ್ಲಿಯತನಕ 75 ರೂಪಾಯಿಗಳೇ ಬರುತ್ತಿವೆ ಎಂದು ಅವರ ಬ್ಯಾಂಕ್ ಪಾಸ್ ಪುಸ್ತಕ ಮತ್ತು ಪೋಸ್ಟಲ್ ನಲ್ಲಿ ಬರುವ ಕಾಗದವನ್ನೂ ಸಹಾ ಕೊಟ್ಟಿದ್ದಾರೆ. ಈ ರೀತಿ ಅಂಗವಿಕಲರಿಗೆ ಮತ್ತು ವಿಧವೆಯರಿಗೆ ಬಜೆಟ್ ಪುಸ್ತಕದಲ್ಲಿ ನೂರು ರೂಪಾಯಿ ಕೊಡುತ್ತೇವೆ ಎಂದು ಹೇಳಿ 75 ರೂಪಾಯಿಗಳನ್ನು ಕೊಟ್ಟರೆ ಇದು ಹೇಗೆ ಸರಿಯಾಗುತ್ತದೆ. ಈ ಅಂಗವಿಕಲರಿಗೆ ಅನ್ಯಾಯವಾಗಬಾರದು ಎನ್ನುವ ದಿಶೆಯಿಂದ ಈ ವಿಷಯವನ್ನು ಕಳಕಳಿಯಿಂದ ಕೇಳಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1-4-98 ರಿಂದ ಇದನ್ನು ನಾವು ಜಾರಿಗೆ ತರುತ್ತೇವೆಂದು ಮುಂಗಡಪತ್ರದಲ್ಲಿ ಹೇಳಿದ್ದೇವೆ. ಈಗಾಗಲೇ ಸರ್ಕಾರಿ ಆಜ್ಞೆಗಳನ್ನು ಮಾಡಿದ್ದೇವೆ. ಏಪ್ರಿಲ್, ಮೇ ತಿಂಗಳಲ್ಲಿ ಕೊಡಲಿಕ್ಕೆ ಆಗದೇ ಹೋದರೆ ಬಹುಶಃ ಅರಿಯರ್ಸ್‌ನ್ನು ಡ್ರಾ ಮಾಡಿ ಕೊಡುತ್ತಿದ್ದೇವೆ. ಇದು 1-4-98ರಿಂದ ಜಾರಿಗೆ ಬರುತ್ತದೆ.

ಕೆ.ಪಿ.ಎಸ್.ಸಿ. ಪರೀಕ್ಷೆಯ ಕೇಂದ್ರದಲ್ಲಿ ತನಿಖಾ ದಳದವರು ಉತ್ತರ ಪತ್ರಿಕೆಗಳನ್ನು ನೀಡಿರುವುದು.

ಶ್ರೀ ಎಸ್ ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಈ ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿದಿರುವ ಮುಖ್ಯಮಂತ್ರಿಗಳ ಗಮನವನ್ನು ನಿನ್ನೆ ನಡೆದಿರುವ ಒಂದು ವಿದ್ಯಮಾನದ ಬಗ್ಗೆ ನಾನು ಸರ್ಕಾರದವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟನ್ನು ನೋಡಿದೆ. "Abolish recruitment on merit". "The Association of unemployed primary and high school teachers has urged the government to cancel the list of teachers selected on the basis of merit." ಎಂದು ಒಂದು ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಅವರದೇ ಆದ ಕಾರಣಕ್ಕೆ . ಆದರೆ ಅದನ್ನು ನಿನ್ನೆಯಿಂದಲೇ ನಮ್ಮ ರಾಜ್ಯದಲ್ಲಿ ಜಾರಿಗೆ ತಂದು ಬಿಟ್ಟಿದ್ದಾರೆ. ನಿನ್ನೆ ರಾಜ್ಯಸರ್ಕಾರದ ವಿವಿಧ ಇಲಾಖೆಗಳಿಗೋಸ್ಕರ ಸುಮಾರು ಒಂದುಸಾವಿರ ಹುದ್ದೆಗಳಿಗೋಸ್ಕರ ದ್ವಿತೀಯದರ್ಜೆ ಗುಮಾಸ್ತರ ಹುದ್ದೆಗಳಿಗೆ ಕೆಪಿಎಸ್‌ಸಿ ಪರೀಕ್ಷೆಯನ್ನು ನಡೆಸಿತು. ಆರೂವರೆ ಲಕ್ಷ ಜನ ಅಭ್ಯರ್ಥಿಗಳು ಅದರಲ್ಲಿ

ಅಪಿಯರ್ ಆದರು. ನಗರದಿಂದಲೇ ಒಂದು ಲಕ್ಷ ಜನರು ಅಪಿಯರ್ ಆದರು. ಅನೇಕರು ಎಲ್ಲಾ ಓದಿಕೊಂಡು ಬಂದಿದ್ದರು. ಅನೇಕರು ನೋಟ್ಸ್‌ನ್ನು ಓದಿಕೊಂಡು ಬಂದಿದ್ದರೆ ಕೆಲವರಿಗೆ ನೋಟ್ಸ್ ಕೊಟ್ಟು ಪಾಸ್ ಮಾಡಲಿಕ್ಕೆ ನಿನ್ನೆ ಪ್ರಯತ್ನಪಟ್ಟಿದ್ದಾರೆ. ನೋಟ್ಸ್ ಓದುವುದು ಬೇರೆ, ನೋಟ್ಸ್ ಕೊಡುವುದು ಬೇರೆ. ನಿನ್ನೆ ಯಲಹಂಕದಲ್ಲಿ ಏರ್‌ಫೋರ್ಸ್ ಸ್ಟೇಷನ್‌ನಲ್ಲಿ ಕೇಂದ್ರೀಯ ವಿದ್ಯಾಲಯದಲ್ಲಿ ಒಂದು ಸೆಂಟರ್ ಕೆಪಿಎಸ್‌ಸಿ ಎಕ್ಸಾಮ್‌ಗೆ. ಆ ಸೆಂಟರ್‌ನಲ್ಲಿ ಕೊಶ್ಚನ್ ಪೇಪರ್ ಕೊಟ್ಟು ಸ್ವಲ್ಪ ಹೊತ್ತಾದ ನಂತರ ಈ ಎಕ್ಸಾಮಿನೇಷನ್‌ನಲ್ಲಿ ಅವ್ಯವಹಾರವಾಗಬಾರದು ಎನ್ನುವುದಕ್ಕೋಸ್ಕರ ಒಂದು ಜಾಗೃತದಳವನ್ನು ನಾವು ಮಾಡಿದ್ದೇವೆ. ಆ ವಿಜಿಲೆನ್ಸ್ ಆಯೋಗದ ಸದಸ್ಯರು ಬಂದು ಯಾರ್ಯಾರು ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಬರೆಯುತ್ತಿದ್ದರು. ಆದರಲ್ಲಿ ಕೆಲವರು ಆರಿಸಿ ಯಾರು ಪರಿಚಯ ಇದ್ದರು, ಅಥವಾ ಪರಿಚಯ ಮಾಡಿಕೊಂಡಿದ್ದರು, ಆ ಅಭ್ಯರ್ಥಿಗಳನ್ನು ನೋಡಿ ಅವರಿಗೆ ಕಂಪ್ಯೂಟರೈಸ್ಡ್ ಆನ್ಸರ್ ಶೀಟ್ಸ್‌ನ್ನು ಕೊಟ್ಟಿದ್ದಾರೆ. ಪರೀಕ್ಷೆಯು ನಡೆಯುತ್ತಿರುವಾಗ ಕೊಟ್ಟಿದ್ದಾರೆ. ಆದನ್ನು ನೋಡಿ ಬೇರೆ ವಿದ್ಯಾರ್ಥಿಗಳು ಇದನ್ನು ಪ್ರತಿಭಟಿಸಿದ್ದಕ್ಕೆ ವಿಜಿಲೆನ್ಸ್‌ನವರು ಹೇಳಿದರಂತೆ, we have got orders from above ಎಂದು ಹೇಳಿ ಈ ವಿರೋಧ ಇನ್ನೂ ಜಾಸ್ತಿಯಾಗಿದ್ದಕ್ಕೆ ನಿಮಗೂ ಬೇಕಾದರೆ ಈ ಆನ್ಸರ್ ಶೀಟ್ಸ್‌ನ್ನು ಕೊಡುತ್ತೇವೆಂದು ಹೇಳಿದ್ದಾರೆ. ಕೊನಗೆ ಎಲ್ಲಿ ಪರೀಕ್ಷೆ ನಡೆಯಬೇಕೂ ಅಲ್ಲಿ ಫೇರಾವ್ ನಡೆದು ವಿಜಿಲೆನ್ಸ್‌ನವರ ವಿರುದ್ಧ ಕೊನೆಗೆ ಯಲಹಂಕ ಪೋಲೀಸ್ ಸ್ಟೇಷನ್‌ನಲ್ಲಿ ಇದರ ಬಗ್ಗೆ ದೂರುಕೂಡ ದಾಖಲಾಗಿದೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದು ಇಂಥ ಜನರು ಕಾಸು ಕೊಟ್ಟು ಆನ್ಸರ್ ಶೀಟ್ಸ್‌ನ್ನು ತೆಗದುಕೊಂಡು ಬರೆಯುವವರು ದ್ವಿತೀಯ ದರ್ಜೆ ಗುಮಾಸ್ತರಾದಾಗ ಆ ಕಛೇರಿಗೆ ಬರುವ ಬಡವ ಇದ್ದಾನಲ್ಲಾ, ಅವನ ಜೇಬನ್ನೇ ನೋಡುವುದು ಅವನಿಂದ ಕಾಸು ತೆಗೆದುಕೊಂಡೇ ಅವರು ಸಹಿ ಮಾಡುವುದು. ಈ ರೀತಿ ಕೆಪಿಎಸ್‌ಸಿ ಜಾಗೃತದಳ ಯಾವುದು ಒಳ್ಳೆಯ ರೀತಿಯಿಂದ ಪರೀಕ್ಷೆ ಮಾಡಬೇಕಾಗಿತ್ತೋ ಅವರೇ ಈ ರೀತಿ ಅವ್ಯವಹಾರಕ್ಕೆ ಕಾರಣರಾಗಿರುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳತ್ತದೆಯೇ? ತುರ್ತಾಗಿ ಇಡೀ ರಾಜ್ಯದ ಜನತೆಗೆ ವಿಶ್ವಾಸ ಬರುವ ಕ್ರಮವೇನಾದರೂ ಜರುಗುತ್ತದೆಯೇ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಸದಸ್ಯರು ಹೇಳಿರುವುದನ್ನು ಗಮನಿಸಿದ್ದೇವೆ. ಅದರ ಬಗ್ಗೆ ವಿಚಾರಣೆ ನೆಡೆಸಿ ಯಾರು ಮಾಡಿದ್ದಾರೆ, ಇದರಲ್ಲಿ ಕೆಲವರು ನೋಟ್ ಪ್ರಿಂಟ್ ಮಾಡುವವರು ಇದ್ದಾರೆ. ಮಾಹಿತಿ ತರಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಒಂದು ಸಾವಿರ ಹುದ್ದೆಗೆ ಏಳೆಂಟು ಲಕ್ಷ ಜನರು ಸ್ಪಡಿ ಮಾಡಿ ಏನೋ ಒಂದು ಉದ್ಯೋಗ ಸಿಗುತ್ತದೆ ಎಂದು ಹೇಳಿ ಬಂದಿದ್ದಾರೆ. ಈಗ ಈ ರೀತಿ ಕೆಪಿಎಸ್‌ಸಿ ಜಾಗೃತದಳದವರು ಕಂಪ್ಯೂಟರೈಸ್ಡ್ ಆನ್ಸರ್‌ಸೀಟ್ ಕೊಟ್ಟು ಬರೆಸಿದ್ದಾರೆ ಎಂದು ಅವರಿಗೆ ಗೊತ್ತಾದರೆ ಆ ಪ್ರಾಮಾಣಿಕ ಯುವಕರ ಮೇಲೆ ಏನು ಏನು ಅಘಾತವಾಗಬಹುದು, ಈ ವ್ಯವಸ್ಥೆ ಬಗ್ಗೆ ಏನಾದರೂ ವಿಶ್ವಾಸ ಬರುತ್ತದೆಯೇ? ಕೆಪಿಎಸ್‌ಸಿಯಲ್ಲಿ ಈ ರೀತಿ ಆಗಬಹುದು, ಎಂದರೆ ಡಾಕ್ಟರ್, ಇಂಜಿನಿಯರ್‌ಗಳನ್ನು ಎಲ್ಲರನ್ನೂ ಅವರೇ ತಾನೇ ಸೆಲೆಕ್ಟ್ ಮಾಡುವಂಥವರು? ಈ ಅನಿಷ್ಟ ಪದ್ಧತಿ ಇದ್ದರೆ ಅದರ ಬಗ್ಗೆ ತೀವ್ರವಾದ

ತನಿಖೆ ಮಾಡಿಸಿ. ಎರಡನೆಯದು ಒಂದು ಸಾವಿರ ಹುದ್ದೆ ಇದ್ದರೆ ನೀವು ಅಪ್ಲಿಕೇಷನ್ಸ್ ಕರೆದು ಯಾವುದೋ ಒಂದು ಮೆರಿಟ್ ಲಿಸ್ಟ್ ತಯಾರು ಮಾಡಿ 1 :10, 1 :20, 1 :100 ಕರೆಯದೆ ಸಾವಿರ ಹುದ್ದೆಗೆ ರಾಜ್ಯದ ಮೂಲೆ ಮೂಲೆಗಳಿಂದ 7-8 ಲಕ್ಷ ಜನ ಇಲ್ಲಿ ಬಂದು ಪ್ರಾಣ ಬಿಡುತ್ತಾರೆ. ಕೊನೆಗೆ ಇದು ಅನ್ಯಾಯ ಆಗುತ್ತದೆ ಎಂದರೆ ಇದಕ್ಕೆ ಏನಾದರೂ ಒಂದು ಪದ್ಧತಿ ಬೇಡವಾ ಸ್ವಾಮಿ? ಹೇಳುವವರು ಕೇಳುವವರು ಯಾರು ಬೇಡವಾ? ಆ ಮಕ್ಕಳ ಗತಿ ಏನು? ಅವನು ಸ್ವಂತ ಖರ್ಚು ಮಾಡಿಕೊಂಡು ಅಲ್ಲಿಂದ ಅಲೆದುಕೊಂಡು ಬಂದಿರುತ್ತಾನೆ. ಅವನಿಗೆ ಅನ್ಯಾಯ ಆಗುತ್ತದೆ.

ಈ ವ್ಯವಸ್ಥೆ ಬಗ್ಗೆ ವಿಶ್ವಾಸ ಇಡುತ್ತಾನಾ? ಅದೂ ಈ ಸದನ ನಡೆಯುತ್ತಿರುವ ಕಾಲದಲ್ಲಿ ಇದು ಅನ್ಯಾಯವಾಗುತ್ತದೆ ಎಂದರೆ ವಿಶ್ವಾಸ ಬರುತ್ತದಾ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಇವತ್ತು ಪತ್ತಿಕೆಯಲ್ಲಿ ವ್ಯಾಪಕವಾಗಿರತಕ್ಕಂಥಹ ವಿಚಾರ ಬಂದಿದೆ. ಯಲಹಂಕದಲ್ಲಿ ನಡೆಯುತ್ತಿರತಕ್ಕ ಅವ್ಯವಹಾರದ ಬಗ್ಗೆ ಇವತ್ತು ಪತ್ರಿಕೆಯಲ್ಲಿ ಬಂದಿದೆ. ತಮಗೆ ಗೊತ್ತಿದೆ ಕೆಪಿಎಸ್‌ಸಿ ಒಂದು ಸ್ವಾಯತ್ತತೆಯ ಸಂಸ್ಥೆ. ರಿಕ್ರೂಟ್‌ಮೆಂಟ್ ಮಾಡಬೇಕಾಗಿರುವಂತಹ ಅಧಿಕಾರ ಸಂಪೂರ್ಣವಾಗಿ ಅವರಿಗೆ ಇರತಕ್ಕದ್ದು : ಆ ಸಂದರ್ಭದಲ್ಲಿ ರಾಜ್ಯ ಸರ್ಕಾರ ಇವತ್ತು ಏನು ಅನ್ಯಾಯ ಆಗುತ್ತಿದೆ, ಅದನ್ನು ಕೂಡ ಗಮನಿಸಿದ್ದೇವೆ. ಪೂರ್ತಿಯಾಗಿರತಕ್ಕಂಥ ವಿವರಣೆಯನ್ನು ಕೆಪಿಎಸ್‌ಸಿಯಿಂದ ನಾವು ಕೇಳಬೇಕಾಗುತ್ತದೆ. ಅವ್ಯವಹಾರ ನಡೆದಿರತಕ್ಕ ಈ ಸಂದರ್ಭದಲ್ಲಿ ನಾಳೆ ಬಾಕಿ ಇರತಕ್ಕಂಥ ಮಕ್ಕಳಿಗೆ ಆಗುತ್ತಿರತಕ್ಕ ತೊಂದರೆಯನ್ನೂ ಸಹ ಗಮನಿಸಬೇಕಾಗುತ್ತದೆ. ತೊಂದರೆಯನ್ನು ಗಮನಿಸಿ ಇದರ ಬಗ್ಗೆ ಒಂದು ವರದಿಯನ್ನು ತರಿಸಿ ಮುಂದಿನ ಕ್ರಮ ಏನು ಎಂದು ಹೇಳುವುದು ಒಂದು. ಎರಡನೆಯದು ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಒಂದು ಸಾವಿರ ಹುದ್ದೆ ಇರತಕ್ಕದ್ದು ಎಂಟು ಲಕ್ಷ ಮಕ್ಕಳು ಪರೀಕ್ಷೆಗೆ ಕುಳಿತಿರತಕ್ಕದ್ದು. ಎಂಟು ಲಕ್ಷ ಮಕ್ಕಳು ಇಡೀ ರಾಜ್ಯದ ಉದ್ದಗಲಕ್ಕೂ ಪರೀಕ್ಷೆ ತೆಗೆದುಕೊಳ್ಳುವ ಬದಲು ಬಹುಶಃ ಎಷ್ಟು ಮಕ್ಕಳು ಅರ್ಜಿ ಹಾಕಿದ್ದಾರೆ, ಅರ್ಜಿ ಹಾಕಿದಂತಹ ಮಕ್ಕಳ ಮೆರಿಟ್ ಆಧಾರದ ಮೇಲೆ ಅದನ್ನು ಮಾಡಲಿಕ್ಕೆ ಇರತಕ್ಕದ್ದು, ರೋಸ್ಟರ್ ಅನುಸರಿಸಿ ಏಕೆ ಮಾಡಲಿಕ್ಕೆ ಕೂಡದು ಎಂದು ಹೇಳುತ್ತಿರುವ ತಮ್ಮ ಸಲಹೆ ಇದೆ. ಈ ಸಲಹೆ ವಿಚಾರಕ್ಕೆ ಯೋಗ್ಯವಾಗಿರತಕ್ಕದು.

ಶ್ರೀ ವಾಟಾಳ್ ನಾಗರಾಜ್ : ಅರ್ಜಿ ಜೊತೆ ಹಣವನ್ನು ತುಂಬಿರುತ್ತಾರಲ್ಲಾ, ಆ ಅರ್ಜಿ ಹಣವನ್ನೂ ನೀವು ಹಿಂದಕ್ಕೆ ಕೊಟ್ಟು ಬಿಡಿ.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರು ನೋಟೀಸ್ ಕೊಟ್ಟಿದ್ದೀರಿ, ಆ ವಿಚಾರದ ಬಗ್ಗೆ ಪ್ರಸ್ತಾಪಮಾಡಿ.

ಶ್ರೀ ಚಂದ್ರಕಾಂತ ಬೆಲ್ಲದ್ : ಅದರ ಬಗ್ಗೆ ನಾನೂ ಹೇಳಿದ್ದೇನೆ. ತಾವು ನಾಳೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ. ಇದು ಬಹಳ ಸೀರಿಯಸ್ಸಾದಂತಹ ವಿಚಾರ ಏಕೆಂದರೆ : ಯಾವುದು

ಜಾಗೃತ ದಳ ಎಂದು ಇದೆ, ಅವರೇ ಈ ಕೆಲಸ ಹೀಗೆ ಮಾಡಲು ಶುರು ಮಾಡಿದರೆ ಅಭ್ಯರ್ಥಿಗಳಿಗೆ ಹೇಗೆ ರಕ್ಷಣೆ ಮಾಡುವುದು?

ಅಧ್ಯಕ್ಷರು : ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಚಂದ್ರಕಾಂತ ಬೆಲ್ಲದ್ : ಅವರ ಮೇಲೆ ಸರಿಯಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಜಾಗೃತ ದಳ ಎಂದು ಹೇಳುವರು ಅವರೇ ಈ ನಮೂನೆ ಉತ್ತರ ಪತ್ರಿಕೆಗಳನ್ನು ಕೊಟ್ಟು ವಿದ್ಯಾರ್ಥಿಗಳನ್ನು ಹಾಳು ಮಾಡಿದರೆ ಯಾವುದರ ಮೇಲೆ ವಿಶ್ವಾಸ ಇಡಬೇಕು?

ಅಧ್ಯಕ್ಷರು : ಅವರು ಹೇಳಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಜೈಲ್‌ನಲ್ಲಿ ನಡೆದ ಘಟನೆಗಳ ಬಗ್ಗೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಅನೇಕ ಜೈಲ್‌ಗಳಿರತಕ್ಕ ಖೈದಿಗಳು ಅವರು ಅಪರಾಧಿಗಳೋ ಅಥವಾ ನಿರಪರಾಧಿಗಳೋ ಎಂದು ಕೋರ್ಟಿನಲ್ಲಿ ತೀರ್ಮಾನ ಆಗಬೇಕು. ನ್ಯಾಯಾಲಯಕ್ಕೆ ಕರೆದುಕೊಂಡು ಹೋಗದೇ ಇದ್ದರೆ ತೀರ್ಮಾನ ಹೇಗೆ ಆಗುತ್ತದೆ? ಚಿತ್ರದುರ್ಗ ಜಿಲ್ಲೆಯಲ್ಲಿ ನಡೆದಿರುವಂತಹ ಘಟನೆ ಬಗ್ಗೆ ಇವತ್ತು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳಲು ಇಚ್ಛಿಪಡುವುದಿಲ್ಲ. ಈಗ ಅನೇಕ ವರ್ಷದಿಂದ ಅವರು ಅಲ್ಲೇ ಕೊಳೆಯುತ್ತಾ ಬಿದ್ದಿದ್ದಾರೆ. ಕೋರ್ಟಿಗೆ ಅವರನ್ನು ಪ್ರೊಡ್ಯೂಸ್ ಮಾಡುವುದಿಲ್ಲ. ಅಲ್ಲಿ ಜೈಲಿನಲ್ಲಿ ವ್ಯವಸ್ಥೆನೂ ಇಲ್ಲ. ಅವರನ್ನು ಬೇರೆ ಬೇರೆ ಜಿಲ್ಲೆಗೆ ತೆಗೆದುಕೊಂಡು ಹೋಗುವಂತಹ ಪ್ರಯತ್ನ ನಡೆಸುತ್ತಿದ್ದಾರೆ. ಇವತ್ತು ಹಿಗ್ಗಾಮುಗ್ಗ ಪೋಲೀಸ್‌ರವರಿಗೆ ಖೈದಿಗಳೇ ಚಚ್ಚಿದ್ದಾರೆ. ಇಂತಹ ಸ್ಥಿತಿ ಬಂದಂತಹ ಸಂದರ್ಭದಲ್ಲಿ ಡಿಎಸ್‌ಪಿ, ಇನ್ಸ್‌ಪೆಕ್ಟರ್, ಎಸ್‌ಐ, ಪೋಲೀಸ್‌ನವರಿಗೆ ಎಲ್ಲರಿಗೂ ಹೊಡೆದು, ಥಳಸಿ ಆದ ಮೇಲೆ ಅಶ್ರುವಾಯು ಪ್ರಯೋಗವೆಲ್ಲಾ ಆಗಿ ಸಾಕಷ್ಟು ಗಲಾಟೆ ಆದ ನಂತರ ಚಿತ್ರದುರ್ಗ ಜಿಲ್ಲೆಯಿಂದ ಬಳ್ಳಾರಿಗೆ ತೆಗೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ಈ ಘಟನೆ ಆಗಿದೆ. ಒಂದು ಈ ಖೈದಿಗಳನ್ನು ನ್ಯಾಯಾಲಯಕ್ಕೆ ಸರಿಯಾದ ಸಂದರ್ಭದಲ್ಲಿ ಹಾಜರು ಪಡಿಸುವ ದಿಕ್ಕಿನಲ್ಲಿ ಇಡೀ ರಾಜ್ಯದ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆಯೇ? ಮತ್ತು ಈ ರೀತಿ ಆಗದೇ ಇರುವ ದಿಕ್ಕಿನಲ್ಲಿ ಅವಕಾಶ ಮಾಡಿಕೊಡುತ್ತೀರಾ? ಖೈದಿಗಳಿಗೆ ವ್ಯವಸ್ಥಿತವಾದ ರೀತಿಯಲ್ಲಿ ಏನಾದರೂ ಅವಕಾಶ ಮಾಡಿಕೊಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಅಧ್ಯಕ್ಷರೆ, ಜೈಲಿನಲ್ಲಿ ಈ ರೀತಿ ಆಗುತ್ತಿರತಕ್ಕದ್ದು ಮೂರು ದಿವಸದಲ್ಲಿ ಎರಡು ಬಾರಿ ಆಗಿರತಕ್ಕದ್ದು. ಜೈಲಿನಲ್ಲಿರತಕ್ಕ ಸ್ಥಳ 32 ಜನಕ್ಕೆ. ಆದರೆ ಅಲ್ಲಿ 172 ಜನಕ್ಕೆ ಅವಕಾಶ ಕೊಟ್ಟಿರತಕ್ಕದ್ದು ಮತ್ತು ಜೈಲಿನಲ್ಲಿ ಎಲ್ಲಾ ರೀತಿಯ ಸರಬರಾಜು ಆಗುತ್ತಿದೆ. ಊಟ ತಿಂಡಿ ಮಧ್ಯಪಾನ ಎಲ್ಲವೂ ಹೊರಗಡೆಯಿಂದ ಸರಬರಾಜು ಆಗುತ್ತಿದೆ. ಜೊತೆಗೆ ಇಸ್ಪೀಟ್ ಸಹ ಸರಬರಾಜು ಆಗುತ್ತಿದೆ. ಸಿಬ್ಬಂದಿ ಕೊರತೆ ಇರತಕ್ಕದ್ದು ಸ್ಪಷ್ಟ.